**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**
**ಸಿ.ಸಿ.ನಂ.2247/2023.**

**ದಿನಾಂಕಃ20.06.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

| | | |
|---|---|---|
| ಸಾಕ್ಷಿಯ ಹೆಸರು | ಧನು | ಚಾಸಾ-3, ಪ್ರಾಸಾ-3 |
| ತಂದೆಯ ಹೆಸರು | ಭಿಮಾ ನಾಯ್ಕ | |
| ವಯಸ್ಸು | 27 ವರ್ಷ | |
| ಉದ್ಯೋಗ | ಅಡುಗೆ ಕೆಲಸ | |
| ವಾಸ | ಚಟ್ನಹಳ್ಳಿ ಗ್ರಾಮ | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ 2 ಮತ್ತು ಆರೋಪಿಯ ಪರಿಚಯವಿದೆ. ಈ ಕೇಸಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ಸಾಕ್ಷಿಯು ಈಗಾಗಲೇ ಗುರುತಿಸಿರುವ ನಿಪಿ 1 ಮತ್ತು 3 ರಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ1 ಸಿ ಮತ್ತು ನಿಪಿ3 ಸಿ ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ನಾನು ಸುಮಾರು 1 ವಷರ್ದ ಹಿಂದೆ ಆರೋಪಿಯ ಮನೆಯ ಮುಂದೆ ಪೊಲೀಸರು ಹೇಳಿದ ಕಾರಣ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಹಾಗೂ ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಿಪಿ1 ಮತ್ತು 3 ಕ್ಕೆ ಬೇರೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ನಿಪಿ4 ರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿದರು, ಸದರಿ ಪೋಟೋವನ್ನು ಯಾವ ವಿಚಾರಕ್ಕೆ ತೆಗೆದರು ಎಂದು ನನಗೆ ಗೊತ್ತಿಲ್ಲ. ಸಾಕ್ಷಿಯು ಈಗಾಗಲೇ ಗುರುತಿಸಿರುವ ಮು ಮಾ 1 ರ ಚೀಟಿಯಲ್ಲಿನ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ಮು ಮಾ 1 ಸಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸರ ಕೋರಿಕೆಯಂತೆ ಮಾಡಿರುತ್ತೇನೆ, ಯಾವ ವಿಚಾರಕ್ಕೆ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣದ ಮದ್ಯದ ಪಾಕೆಟು ಮತ್ತು ಹಣ ನೋಡಿದಲ್ಲಿ ಗುರುತಿಸಲಾಗುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸಸಅ ಅವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ01.04.2023 ಮಧ್ಯಾಹ್ನ 1.15 ಗಂಟೆಯ ಸಮಯದಲ್ಲಿ ಚಾಸಾ 1 ಮತ್ತು ಇತರರು ಆಲಘಟ್ಟ ಗ್ರಾಮದ ಸೇವಲಾಲ್ ದೇವಸ್ಥಾನದ ಬಳಿ ಇದ್ದ ನನಗೆ ಮತ್ತು ಚಾಸಾ2 ರವರಿಗೆ ಪರಿಚಯ ಮಾಡಿಕೊಂಡು ಆರೋಪಿಯು ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿದ್ದಾರೆ ದಾಳಿಗೆ ಸಹಕರಿಸಿ ಎಂದು ಕೋರಿ, ನಾವು ಒಪ್ಪಿದ ಮೇರೆಗೆ ನಮಗೆ ನಿಪಿ1 ರಂತೆ ನೋಟೀಸು ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಂತರ, ಚಾಸಾ1 ರವರ ಇಲಾಖಾ ವಾಹನದಲ್ಲಿ ಮಧ್ಯಾಹ್ನ 3.30 ಕ್ಕೆ ಸೇವಲಾಲ್ ದೇವಸ್ಥಾನ ತಲುಪಿ ಅಲ್ಲಿ ಹೋಗಿ ಆರೋಪಿಯನ್ನು ಸುತ್ತುವರಿದು ಹಿಡಿದು ಆಕೆಯನ್ನು ವಿಚಾರಿಸಿದಾಗ ಆಕೆಯ ಹೆಸರು ನೀಲಾಬಾಯಿ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ನಂತರ ಆಕೆಯ ಬಳಿ ಇದ್ದ ಕಪ್ಪು ಬಣ್ಣದ ಪ್ಲಾಸ್ಟಿಕ್ ಚೀಲವನ್ನು ನಮ್ಮ ಸಮಕ್ಷಮ ಪರಿಶೀಲನೆ ಮಾಡಿದಾಗ ಅದರಲ್ಲಿ 90 ಎಂ.ಎಲ್.ನ 50 ರಾಜಾವಿಸ್ಕಿ ಪೌಚುಗಳು ಮತ್ತು ಮದ್ಯ ಮಾರಾಟದ ಬಾಬ್ತು ಗಳಿಸಿದ ರೂ.100/-ಹಣ ಇತ್ತು ಎಂದರೆ ಸರಿಯಲ್ಲ. ಸದರಿ ವ್ಯಕ್ತಿ ಬಳಿ ಮದ್ಯ ಮಾರಾಟ ಮಾಡಲು ಪರವಾನಗೆ ಇದೆಯೇ ಎಂದು ವಿಚಾರಿಸಿದಾಗ ಇಲ್ಲ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ನಂತರ ಎಲ್ಲಾ ಮದ್ಯವನ್ನು ಅದೇ ಚೀಲದಲ್ಲಿ ಹಾಕಿ ಹೊಲಿದು ಪ್ಯಾಕ್ ಮಾಡಿ ನಮ್ಮಗಳ ಸಹಿ ಇರುವ ಚೀಟಿ ಅಂಟಿಸಿದರು ಎಂದರೆ ಸರಿಯಲ್ಲ. ಈ ಸಂಬಂಧವಾಗಿ ಮಧ್ಯಾಹ್ನ 3.30 ರಿಂದ 4 ಗಂಟೆಯ ವರೆಗೆ ನಿಪಿ3 ರಂತೆ ಮಹಜರ್ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ4 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ಈ ಕೇಸಿನ ಎಲ್ಲಾ ವಿಚಾರಗಳು ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದ ಃಇಲ್ಲ**

**ಮರು ವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದಃನ್ಯಾಃದಂ.,ರವರು, ಕಡೂರು.